ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **16.06.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲು**:** ಪ್ರತಿವಾದಿ ಪರಃ ವಕೀಲರ ಮೂಲಕ ಃ</u>

ನಾನು 10 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ವಾದ ಪತ್ರವನ್ನು ತಯಾರು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಅರಸೀಕೆರೆ ಸಿದ್ದಮ್ಮರವರು ನನ್ನ ಮುತ್ತಜ್ಜಿ ಎಂದು ತೋರಿಸಿಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಅದೇ ರೀತಿ ಸದರಿಯವರ ಹೆಸರಿನಲ್ಲಿ ದಾವಾ ಸ್ವತ್ತುಗಳು ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳು ನನ್ನ ದೂರದ ಸಂಬಂಧಿಕರು ಆಗಿರುತ್ತಾರೆ. ನನ್ನ ಮುತ್ತಜ್ಜಿ ಎಂದು ಹೇಳುವ ಅರಸೀಕೆರೆ ಸಿದ್ದಮ್ಮರವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಸಿದ್ದಲಿಂಗಯ್ಯ @ ಕೆಂಚಯ್ಯ ರವರು ನನಗೆ ತಾತನಾಗಬೇಕು. ಸದರಿಯವರಿಗೆ ಇಬ್ಬರು ಪತ್ನಿಯರು ಇರುತ್ತಾರೆ. ಸದರಿ ಸಿದ್ದಲಿಂಗಯ್ಯ ಮತ್ತು ಅವರ ಸಹೋದರನ ನಡುವೆ ವಿಭಾಗ ಆಗಿರುವುದಿಲ್ಲ. ಸಾಮಾನ್ಯವಾಗಿ ಮೃತರ ವಾರಸುದಾರರಿಗೆ ಮಾತ್ರ ಪೌತಿ ಖಾತೆ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗ್ರಾಮ ಲೆಕ್ಕಾಧಿಕಾರಿ ಅಥವಾ ಪಿ.ಡಿ.ಓ. ರವರು ಗ್ರಾಮಕ್ಕೆ ಹೋಗಿ ವಾರಸುದಾರರ ಬಗ್ಗೆ ವಿಚಾರಣೆ ಮಾಡಿ ಆ ನಂತರ ಪೌತಿ ಖಾತೆ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕಂದಾಯ ನಿರೀಕ್ಷಕರು ಪರಿಶೀಲಿಸಿ, ಆ ನಂತರ ಖಾತೆ ಮಾಡುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ಬೈರವಯ್ಯರವರು ದ 1992-93 ರಲ್ಲಿ ಸುಳ್ಳಾಗಿ ಖಾತೆ ಮಾಡಿಸಿಕೊಂಡಿರುತ್ತಾರೆ. ಸದರಿ ವಿಚಾರ ನನಗೆ ಕೊರೋನಾ ಅವಧಿಯಲ್ಲಿ ಗೊತ್ತಾಗಿದ್ದು, ನಿರ್ದಿಷ್ಟವಾಗಿ ಇಸವಿ ಗೊತ್ತಿರುವುದಿಲ್ಲ. ನಾನು ಸದರಿ ಖಾತೆಯನ್ನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲ. ಊರಿನಲ್ಲಿ ಮಾತ್ರ ಪಂಚಾಯಿತಿ ಆಗಿರುತ್ತದೆ. ಎಂ.ಆರ್. ನಂ. 78/2016-17 ರಂತೆ ಖಾತೆ ಆಗಿರುವುದು ನನಗೆ 2020 ರಲ್ಲಿ ತಿಳಿದುಬಂದಿರುತ್ತದೆ. ನಾನು ಪಂಚಾಯಿತಿಗಳಲ್ಲಿ ಅದನ್ನು ಪ್ರಶ್ನೆ ಮಾಡಿರುತ್ತೇನೆ. ಸದರಿಯವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ.

3. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಿರುವ ಬಗ್ಗೆ ನನಗೆ ಇತ್ತೀಚೆಗೆ ಗೊತ್ತಾಗಿರುತ್ತದೆ. ಪ್ರತಿವಾದಿಗಳು ಸದರಿ ಮನೆಯಲ್ಲಿ ಎಷ್ಟು ವರ್ಷಗಳಿಂದ ವಾಸವಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮನೆ ನಿರ್ಮಾಣ ಮಾಡುತ್ತಿದ್ದಾಗ ಸಹ ನನಗೆ ಗೊತ್ತಿರುವುದಿಲ್ಲ. ಪ್ರಸ್ತುತವಾಗಿ ದಾವಾ ಸ್ವತ್ತು 1 ರಿಂದ 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತು ನನ್ನ ಹೆಸರಿನಲ್ಲಿ ಇದ್ದ ಬಗ್ಗೆ ದಾಖಲೆ

ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿ ಈಗ 1 ರಿಂದ 3 ನೇ ಪ್ರತಿವಾದಿಗಳು ವಾಸವಿರುತ್ತಾರೆ. ನಾನು ದಾವಾ ಸ್ವತ್ತಿನ ಸಂಬಂಧವಾಗಿ 1 ರಿಂದ 3 ನೇ ಪ್ರತಿವಾಗಿಗಳಿಗೆ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.